A Jain Institution
Sitadevi Ratanchand Nahar
# ADARSH EVENING COLLEGE
(Affiliated to Bengaluru City University)

# CAMPUS ಕಲರವ

## ಫೆಬ್ರವರಿ ಸಂಚಿಕೆ – 2026



ದತ್ತರಾಮ್ ಶ್ರೀವತ್ಸ
ವಾಣಿಜ್ಯ ವಿಭಾಗದ ಉಪನ್ಯಾಸಕರು

CAMPUS ಕಲರವ

ಫೆಬ್ರವರಿ ಸಂಚಿಕೆ – 2026

# ಅತಿ ಆಸೆ ಗತಿಗೇಡು



ಒಂದೂರಲ್ಲಿ ಒಬ್ಬ ರಾಜ ಇರ್ತಾನೆ ರಾಜನ ಮನೆಯಲ್ಲಿ ಒಂದು ನಾಯಿಮರಿ ಇರುತ್ತೆ, ನಾಯಿಮರಿನ ಅವನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸ್ತಾ ಇರ್ತಾನೆ ಅವನಿಗೆ ಮದುವೆ ವಯಸ್ಸಾಗಿರುತ್ತೆ ಮದುವೆ ಆಗುತ್ತಾನೆ ಹೆಂಡತಿ ಗರ್ಭಿಣಿ ಆಗ್ತಾಳೆ, ನಾಯಿನು ಕೂಡ ಗರ್ಭಿಣಿ ಆಗಿರುತ್ತೆ ಅವಾಗ ಏನಾಗುತ್ತೆ ಅಂತಂದ್ರೆ ರಾಜ ಇದ್ದೋನು ಅವಳ ಹೆಂಡ್ತಿಗಿಂತ ನಾಯಿನ ತುಂಬ ಇಷ್ಟ ಪಡ್ತಾ ಇರ್ತಾನೆ ಅವಾಗ ಅವಳಿಗೆ ಕೋಪ ಬಂದ್ಬಿಡುತ್ತೆ ಅವಾಗ ಅವಳು ಏನು ಮಾಡ್ತಾಳೆ ಅಂದ್ರೆ ನಾಯಿಗೆ ಸ್ವಲ್ಪ ಊಟ ಕೊಡೋಕೆ ಶುರು ಮಾಡ್ತಾಳೆ ರಾಜ ಬಂದು ನಾಯಿಗೆ ಊಟ ಹಾಕ್ಬ ಅಂತ ಕೇಳ್ತಾನೆ ಹೂ ರಿ ಹಾಕಿದ್ದೀನಿ ತುಂಬಾ ಚೆನ್ನಾಗಿ ನೋಡ್ಕೊತಾ ಇದೀನಿ ಅಂತಾಳೆ, ಅವಾಗ ರಾಜನಿಗೆ ತುಂಬಾ ಖುಷಿಯಾಗುತ್ತೆ ಆದರೆ ಅವಳು ಆ ನಾಯಿನ ಚೆನ್ನಾಗಿ ನೋಡ್ಕೊತ ಇರಲ್ಲ ರಾಜನ ಮುಂದೆ ನಟನೆ ಮಾಡ್ತಾ ಇರ್ತಾಳೆ ಆಗ ಇದ್ದಕ್ಕಿದ್ದಂತೆ ರಾಜ್ಯದಲ್ಲಿ ಯುದ್ಧ ಪ್ರಾರಂಭವಾಗುತ್ತೆ ರಾಜ ಅವರ ಸೈನಿಕರನ್ನು ಕರ್ಕೊಂಡು ಹೋಗ್ತಾನೆ, ಹೋಗುವಾಗ ರಾಣಿಗೆ ಒಂದು ಮಾತು ಹೇಳ್ತಾನೆ ನಾಯಿನ ತುಂಬಾ ಚೆನ್ನಾಗಿ ನೋಡ್ಕೋ ಅಂತ, ಅವಾಗ ರಾಣಿಗೆ ಕೋಪ ಬರುತ್ತೆ ಈ ನಾಯಿ ಇರೋದ್ರಿಂದ ನನ್ನ ಮರಿತಾ ಇದ್ದಾರೆ ಅಂತ ಮಲಗಿರಬೇಕಾದರೆ ನಾಯಿಗೆ ಬಿಸ್ನೀರ್ ಹುಯ್ದು ಬಿಡ್ತಾಳೆ ಆಗ ನಾಯಿ ಅವಳಿಗೆ ಒಂದು ಶಾಪ ಕೊಡುತ್ತೆ ಆ ಶಾಪ ಏನಂದ್ರೆ ನನಗುಟ್ಟೋ ಮಕ್ಕಳು ನಿನಗಾಗಿ ನಿನಗುಟ್ಟೊ ಮಕ್ಕಳು ನನಗಾಗಲಿ ಅಂತ ಶಾಪ ಕೊಡುತ್ತೆ ರಾಣಿಗೆ ಹೆರಿಗೆ ಆಗುತ್ತೆ ಅವಳಿಗೆ ಎರಡು ಗಂಡು ನಾಯಿ ಮರಿಗಳು ಜನಿಸುತ್ತವೆ.

ನಾಯಿಗೆ ಎರಡು ಹೆಣ್ಣು ಮಕ್ಕಳು ಜನಿಸುತ್ತವೆ, ರಾಣಿ ಏನ್ ಮಾಡ್ತಾಳೆ ಅಂದ್ರೆ ಅಯ್ಯೋ ಶಾಪ ಕೊಟ್ಟಿದ್ದು ನಿಜ ಆಗೋಯ್ತಲ್ಲ ರಾಜ ಬಂದ್ರೆ ನನ್ನ ಬಿಡುತ್ತಾನೆ ಅಂತ ಹೇಳಿ ನಾಯಿ ಮಲಗಿರಬೇಕಾದರೆ ಅಲ್ಲಿದ್ದ ಮಕ್ಕಳನ್ನ ಅದಲು ಬದಲು ಮಾಡ್ತಾಳೆ, ಆಗ ನಾಯಿ ರಾಣಿ ದಿನಾಲು ಈ ರೀತಿ ಮಾಡುವುದನ್ನು ನೋಡಿ ದಿನ ಇತರ ಮಾಡ್ತಾರಲ್ಲ ರಾಣಿ ನನ್ ಮಕ್ಕಳಿಂದ ನನ್ನ ದೂರ ಮಾಡಿಬಿಡುತ್ತಾರೆ ಅಂತ ಎರಡು ಮಕ್ಕಳನ್ನು ಸಹ ಕರ್ಕೊಂಡು ದೂರ ಹೊರಟುಹೋಗ್ಬಿಡುತ್ತೆ ಒಂದು ಬಂಡೆ ಕೆಳಗಡೆ ವಾಸ ಮಾಡ್ತಾ ಇರುತ್ತೆ ಆಗ ರಾಜನಿಗೆ ಯುದ್ಧ ಮಾಡಿ ಸುಸ್ತಾಗುತ್ತೆ ಸೈನಿಕ ನನಗೆ ತುಂಬಾ ನೀರು ದಾಹ ಆಗ್ತಾ ಇದೆ ಹೇಗಾದರೂ ಮಾಡಿ ನನಗೆ ನೀರು ಕೊಡು ಅಂತ ಕೇಳ್ತಾನೆ, ಪ್ರಭು ಸುತ್ತ ನೋಡಿದರೂ ಬಂಡೆಗಳು ನಾನು ಹೇಗೆ ಕೊಡಲಿ ನೀರು ಅಂತ ಸೈನಿಕ ಹೇಳ್ತಾನೆ ಆಗ ರಾಜ ಸುತ್ತಲು ನೋಡ್ತಾ ಇರ್ತಾನೆ ಬಂಡೆ ಮಧ್ಯದಲ್ಲಿ ಹೋಗೆ ಹೋಗ್ತಾಯಿರುತ್ತೆ ಸೈನಿಕ ಅಲ್ಲಿ ನೋಡು ಅಲ್ಲಿ ಹೋಗೆ ಹೋಗ್ತಾ ಇದೆ ಅಲ್ಲಿ ಹೋಗಿ ನೀರು ಇದೆಯಾ ಕೇಳೋಣ ಅಂತ ಅಲ್ಲಿಗೆ ಹೋಗ್ತಾರೆ ಆಗ ನಾಯಿ ಇರಲ್ಲ ಅದರ ಎರಡು ಮಕ್ಕಳಿರುತ್ತೆ ನೀರ್ ಕೊಡ್ತೀರಾ ಸ್ವಲ್ಪ ಅಂತ ರಾಜ ಕೇಳುತ್ತಾನೆ ಅವರು ತುಂಬಾ ಸುಂದರವಾಗಿರುತ್ತಾರೆ ನಾವು ರಾಜರು ನಮ್ಮನ್ನ ಮದುವೆಯಾಗ್ತಿರ ಅಂತ ರಾಜ ಕೇಳ್ತಾನೆ ಹಿರಿಮಗಳು ಮದುವಯಾಗ್ತಿನಿ ಅಂತ ಹೇಳುತ್ತಾಳೆ ಕಿರಿ ಮಗಳು ಅಮ್ಮನ ಕೇಳೋಣ ಅಂತ ಹೇಳ್ತಾಳೆ ಹಿರಿ ಮಗಳು ನೀನು ನಿಮ್ಮ ಅಮ್ಮನ ನಂಬಿಕೊಂಡಿದ್ದರೆ ಈ ಬಂಡೆಯಲೇ ಇರಬೇಕಾಗುತ್ತೆ ಬಾ ಹೋಗೋಣ ಅಂತ ಹೇಳುತ್ತಾಳೆ ಆಗ ಕಿರಿ ಮಗಳೂ ಒಪ್ಕೊಳ್ತಾಳೆ.

ಆಗ ರಾಜ ಮತ್ತು ಸೈನಿಕ ಇಬ್ಬರನ್ನು ಕರ್ಕೊಂಡು ಹೊರಟುಹೋಗ್ಬಿಡ್ತಾರೆ ಆದ್ರೆ ಕಿರಿ ಮಗಳು ಒಂದು ಒಳ್ಳೆ ಉಪಾಯ ಮಾಡಿರ್ತಾಳೆ ಏನೆಂದರೆ ಹೋಗ್ಬೇಕಾದ್ರೆ ಸ್ವಲ್ಪ ಸೊಪ್ಪುಗಳನ್ನು ಮುಕ್ಕೊಂಡಿರ್ತಾಳೆ, ಅವಳು ಹೋಗೋ ದಾರಿ ಉದ್ದುಕೊಂಡು ಒಂದೊಂದು ಸೊಪ್ಪನ್ನು ಇಟ್ಕೊಂಡು ಹೋಗಿರ್ತಾಳೆ ಏಕಂತಂದ್ರೆ ಅವರ ಅಮ್ಮ ಬರ್ಲಿ ಅಂತ ಆಗ ಅಮ್ಮ ಸುತ್ತಲೂ ಹುಡುಕ್ತಾಳೆ, ಯಾರು ಇರಲ್ಲ ಆ ಸೊಪ್ಪು ನೋಡ್ತಾ ಹೋಗ್ತಾಳೆ ಹೋದಾಗ ಇವರಿಬ್ಬರೂ ಮದುವೆ ಆಗಿರುತ್ತಾರೆ ಓಹೋ ಮದುವೆಯಾಗಿದ್ದೀರ ಇವಾಗ ನಾನು ಹೋದ್ರೆ ಬರಿ ಕೈಯಲ್ಲಿ ನನ್ನ ಮಕ್ಕಳಿಗೆ ತೊಂದರೆ ಆಗುತ್ತೆ ಅಂತ ವಾಪಸ್ ಬಂದ್ಬಿಡ್ತಾಳೆ ಮತ್ತೊಂದು ದಿನ ಹೋಗ್ತಾಳೆ, ಯಾರ್ ಮನೆಗೆ ಅಂದ್ರೆ ಕಿರಿ ಮಗಳು ಮನೆಗೆ ಹೋಗ್ತಾಳೆ ಅವಳು ಅಮ್ಮ ಬಂದ್ಲು ಅಂತ ಅಡಿಗೆ ಮಾಡಿ ಖುಷಿ ಖುಷಿಯಿಂದ ಮಾತನಾಡಿಸಿಕೊಂಡು ಇರ್ತಾರೆ ಕಿರಿ ಮಗಳು ಸೈನಿಕನನ್ನು ಮದುವೆಯಾಗಿರುತ್ತಾರೆ.

ಹಿರಿಮಗಳು ರಾಜನನ್ನು ಮದುವೆಯಾಗಿರುತ್ತಾರೆ ನಾಯಿ ಕಿರಿಮಗಳ ಮನೆಯಿಂದ ಇರಿ ಮಗಳಿಗೆ ಮನೆಗೆ ಹೋಗುತ್ತೆ ಅವಳು ಇದ್ದಕಿದ್ದಂತೆ ಬಾಯಿಗೆ ಬಂದಾಗೆ ಬೈತಾಳೆ ನೀನು ಏಕೆ ಬಂದೆ ನನಗೆ ಅವಮಾನ ಆಗುತ್ತೆ ನಾಯಿ ಮಗಳು ಅಂತ ಕರೀತಾರೆ ನನ್ನ ಇಲ್ಲಿಂದ ಹೊರಟು ಹೋಗು ಅಂತ ಬೈದು ಅವಳ ಮೇಲೆ ಬೇಳೆ ಸಾರು ಹಾಕ್ಬಿಡ್ತಾಳೆ ಆ ಬಿಸಿಗೆ ನಾಯಿ ಸತ್ತೋಗ್ಬಿಡುತ್ತೆ ಆಗ ಕಿರಿ ಮಗಳು ಎಲ್ಲಿ ಅಮ್ಮ ಬರಲೇ ಇಲ್ವಲ್ಲ ಅಂತ ಅಕ್ಕನ ಮನೆಗೆ ಹೋದಾಗ ಹೊರಗೆ ಸತ್ತು ಬಿದ್ದಿರುತ್ತೆ ಅದನ್ನ ತಗೊಂಡು ಬಂದು ಒಂದು ಪೆಟ್ಟಿಗೆ ಒಳಗಡೆ ಹಾಕಿ ಇಟ್ಟಿರುತ್ತಾರೆ ಇದಕ್ಕಿದಂತೆ ಯುದ್ಧ ಶುರು ಆಗುತ್ತೆ ಇದುಕ್ ಹೋಗ್ಬೇಕಾದ್ರೆ ಒಂದು ಪತ್ರ ಕೊಟ್ಟಿರುತ್ತಾನೆ ರಾಜ ಸೈನಿಕನ ಕೈಯಲ್ಲಿ ಇಲ್ಲಿ ನೋಡು ಆ ಪೆಟ್ಟಿಗೆ ಒಳಗಡೆ ಒಂದು ಪತ್ರ ಇದೆ ತಗೊಂಡ್ ಬಾ ಅಂತ ಸೈನಿಕ ಹೇಳ್ತಾನೆ ಆಗ ಅವಳಿಗೆ ಗಾಬರಿಯಾಗುತ್ತೆ ಅಯ್ಯೋ ಏನ್ ಮಾಡೋದು ಅಂತ ಹೇಳಿ ಹೋಗಿ ಪೆಟ್ಟಿಗೆ ಓಪನ್ ಮಾಡ್ತಾಳೆ ಇದ್ದಕ್ಕಿದ್ದಂಗೆ ಪೆಟ್ಟಿಗೆ ತುಂಬಾ ಚಿನ್ನ ಆಗಿಬಿಟ್ಟಿರುತ್ತೆ ತುಂಬಾ ಖುಷಿ ಪಟ್ಟಿಡ್ತಾಳೆ ಆ ಚಿನ್ನಗಳನ್ನ ಹಾಕೊಂಡು  ನೀರಿಗೆ ಹೋಗ್ತಾಳೆ ಅಕ್ಕ ಕೇಳ್ತಾಳೆ, ಎಲ್ಲಿತ್ತು ನಿನಗೆ ಇಷ್ಟೊಂದು ಚಿನ್ನ ಅಂತ ಕೇಳ್ತಾರೆ ಆಗ ಹೇಳ್ತಲೇ ಅಮ್ಮನ ಹೊಡೆದು ಸಾಯಿಸಿದಿಯಲ್ಲ ಅದನ್ನ ತಗೊಂಡು ಹೋಗಿ ಪೆಟ್ಟಿಗೆ ಒಳಗಡೆ ಹಾಕಿದ್ದೆ ಚಿನ್ನ ಆಗ್ಬಿಟ್ಟಿದೆ ಅಂತ ಹೇಳ್ತಾಳೆ ಹೌದಾ ನಾನು ಮಾಡ್ತೀನಿ ಅಂತ ಹೇಳಿ ಬೀದಿಲೋಗೋ ನಾಯಿನ ಸಾಯಿಸಿ ಪೆಟ್ಟಿಗೆ ಒಳಗಡೆ ತಗೊಂಡು ಹೋಗ್ತಾಳೆ ಆಗ ರಾಜ ಹೇಳ್ತಾನೆ ಅಲ್ಲಿದ್ದಿದ್ದು ಪೆಟ್ಟಿಗೆ ಒಳಗಡೆ ಇರೋ ಪತ್ರ ತಗೊಂಡ್ ಬಾ ಖುಷಿ ಖುಷಿಯಿಂದ ಹೋಗ್ತಾಳೆ ಗಬ್ಬು ವಾಸನೆ, ಆಗ ರಾಜ ಅವಳನ್ನ ಬೈದು ಪತ್ರನೆಲ್ಲ ಹಾಳು ಮಾಡಿದೆ ಅಂತ ಹೇಳ್ತಾನೆ

ಇದರಲ್ಲಿ ಅರ್ಥ ಮಾಡಿಕೊಳ್ಳುವ ವಿಷಯ ಏನೆಂದರೆ ಅತಿ ಆಸೆ ಗತಿಗೇಡು ಇದು ನೀತಿ ಕಥೆ ಆಗಿದೆ

**ಸಿ. ಎಂ ಮಹದೇವ ಸ್ವಾಮಿ**
ದ್ವಿತೀಯ ಬಿ.ಕಾಂ

## STATISTICS : THE HIDDEN POWER BEHIND DATA SCIENCE




In today's digital era, terms like *Artificial Intelligence*, *Machine Learning*, and *Big Data* are everywhere. From online shopping recommendations to fraud detection and healthcare analytics, data-driven technologies are transforming our lives. But behind these intelligent systems lies a powerful foundation — **Statistics**.

Statistics is more than numbers and formulas; it is the science of understanding data. Every data science project begins with analyzing data using statistical tools such as mean, median, standard deviation, and correlation. These measures help us summarize information, identify patterns, and detect unusual values. Without statistics, raw data would remain meaningless.

Machine learning itself is built on probability — a core branch of statistics. When a bank predicts loan risk or an email filter detects spam, it calculates probabilities rather than making random guesses. Models like logistic regression and Naïve Bayes are rooted in statistical theory. Thus, machine learning is essentially applied statistics supported by computing power.

Statistics also ensures that decisions are based on evidence. Through proper sampling methods, hypothesis testing, and confidence levels, it helps determine whether a result is genuine or merely due to chance. This prevents biased conclusions and improves reliability.

Moreover, statistical validation techniques such as cross-validation and performance metrics ensure that models perform well not just on training data but also in real-world situations. Many failures in machine learning arise from poor statistical reasoning rather than coding errors.

In real life, statistics supports fraud detection, financial risk analysis, healthcare diagnostics, recommendation systems, and quality control. It enables organizations to manage uncertainty and make informed decisions.

**Prof:- Uma Mahesh**
Department of Statistics

## ಫೆಬ್ರವರಿ ಸಂಚಿಕೆ – 2026

# ಇಂದು ಜಗತ್ತಿನಲ್ಲಿ ಹಣ ಮುಖ್ಯವೋ ಸ್ನೇಹ ಮುಖ್ಯವೋ?



**ಪೀಠಿಕೆ :** ನನ್ನ ಅನಿಸಿಕೆಯ ಪ್ರಕಾರ ಜಗತ್ತಿನಲ್ಲಿ ಸ್ನೇಹ ಮುಖ್ಯ, ಹಣ ಬರುತ್ತೆ, ಹೋಗುತ್ತೆ ಆದರೆ ಹಣ ಎಲ್ಲಾ ಕಡೆಯಲ್ಲಿಯೂ ಮುಖ್ಯವನ್ನು ಪಡೆಯೋದಿಲ್ಲ, ಹಣವೇ ಎಲ್ಲಾ ಅಲ್ಲ, ಹಣಬೇಕು ಅವಶ್ಯಕತೆಗೆ ಮಾತ್ರ, ಹಣವೇ ಮುಖ್ಯ ಅಲ್ಲ, ಹಣವೇ ಎಲ್ಲಾ ಆಗೋಲ್ಲ.

**ವಿಷಯ:** ಸ್ನೇಹ ಅನ್ನೋದು ಒಂದು ಅಭೂತಪೂರ್ವವಾದ ಸಂಬಂಧ. ಹುಟ್ಟಿನಿಂದಲೂ ಮನುಷ್ಯ ಸಂಗ ಜೀವಿ. ನಾವು ಚಿಕ್ಕಂದಿನಿಂದಲೂ ನಮಗೆ ತಿಳಿಯದಲೇ ಒಂದು ಸ್ನೇಹದ ಸರಪಳಿಯಲ್ಲಿ ಬದುಕುತ್ತಾ ಬಂದಿದ್ದೇವೆ. ಹುಟ್ಟಿದಾಗ ಅಮ್ಮನ ಅಕ್ಕರೆಯ ಸ್ನೇಹ, ನಂತರ ಶಾಲೆಯಲ್ಲಿ ಶಿಕ್ಷಕರ ಸ್ನೇಹ, ಅದಾದ ಮೇಲೆ ಸಹಪಾಠಿಗಳ ಸ್ನೇಹ, ದಾಂಪತ್ಯದಲ್ಲಿ ಗಂಡ ಹೆಂಡತಿಯ ಪರಸ್ಪರ ಸ್ನೇಹ, ಒಂದು ಉತ್ತಮ ಸ್ನೇಹವೇ ಒಂದು ಉತ್ತಮ ದಾಂಪತ್ಯದ ತಳಹದಿ ಅನ್ನುವುದು ನನ್ನ ಅಭಿಪ್ರಾಯ. ಸ್ನೇಹ ಅನ್ನೋ ಪದವು ಹೇಗೆ ಅಮ್ಮ, ಅಪ್ಪ, ಗುರು, ಶಿಷ್ಯ ಎಂಬ ಚಿಕ್ಕಚಿಕ್ಕ ಪದಗಳು ಹೇಗೆ ಅಗಾಧವಾದ ಅರ್ಥವನ್ನು ಹೊಂದಿದೆಯೋ ಅದೇ ರೀತಿಯಾಗಿ ಈ ಸ್ನೇಹ ಅನ್ನುವ ಪದ ಅದ್ಭುತವಾದ ಅರ್ಥವನ್ನು ಒಳಗೊಂಡಿದೆ.

ಸ್ನೇಹ ಒಂದೇ ಯಾವ ಜಾತಿ, ಮತ, ಕುಲ, ಧರ್ಮವನ್ನು ಕೇಳುವುದಿಲ್ಲ, ಕಪ್ಪು, ಬಿಳುಪು, ಬಡವ, ಬಲ್ಲಿದ, ಶ್ರೀಮಂತ ಅಂತ ನೋಡಿ ಆಗುವುದಿಲ್ಲ. ಪರಿಶುದ್ಧವಾದ ಮನಸ್ಸು, ಒಂದೇ ಅಭಿರುಚಿ, ಒಂದೇ ತರಹದ ಸ್ವಭಾವ ಇದ್ದರೆ ಸ್ನೇಹ ಅದಕ್ಕೆ ಯಾವ ರೀತಿಯ ಅಳತೆಯಗೋಲು ಇಲ್ಲವೇ ಇಲ್ಲ. ಅಳತೆಗೋಲಿಲ್ಲದೆ ಆಗುವುದೇ ಸ್ನೇಹ, ಅನ್ನೋದು ನಮ್ಮ ಮನಸ್ಸಿನ ದುಃಖ ದುಗುಡಗಳನ್ನು ಕಳೆಯುವ ಸಂತೋಷವನ್ನು ಹೆಚ್ಚಿಸುವ ಕೂಡುಕಳೆಯುವ ಸುಲಭವಾದ ಲೆಕ್ಕದ ಹಾಗೆ ನಾವು ಹುಟ್ಟಿನಿಂದಲೇ ಅಮ್ಮ, ಅಪ್ಪ, ಅಣ್ಣ, ತಮ್ಮ, ತಂಗಿ, ಅಕ್ಕ, ಬಂಧು ಬಳಗ ಎಲ್ಲಾ ಸಂಬಂಧಗಳು ಸಿಗುತ್ತದೆ. ಆದರೆ ಸ್ನೇಹ ಎನ್ನುವ ಸಂಬಂಧ ಅನಿರೀಕ್ಷಿತವಾಗಿ ನಮಗೆ ಗೊತ್ತಿಲ್ಲದೆ ಆಗುವಂತದ್ದು. ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯ ಅನ್ನುವ ಹಾಗೆ ನಾವೆಲ್ಲ ಇರುತ್ತೇವೋ? ಸ್ನೇಹಿತರು ಎಲ್ಲಿ ಇರುತ್ತಾರೆಯೋ ಅವರ ಆಗಮನ ನಮ್ಮ ಜೀವನದಲ್ಲಿ ಅನಿರೀಕ್ಷಿತ (ಉದಾಹರಣೆಗೆ ಇವತ್ತಿನ ಈ ಸನ್ನಿವೇಶವನ್ನು ಕನ್ನಡ ವಿದ್ಯಾರ್ಥಿಗಳು ಮತ್ತು ನಮ್ಮ ಕನ್ನಡದ ಗುರುಗಳು) ಒಂದು ಸ್ನೇಹ ಮನುಷ್ಯನನ್ನು ಎಂತಹ ಸ್ಥಾನದಿಂದ ಎಂತಹ ಸ್ಥಾನಕ್ಕೆ ಕರೆದುಕೊಂಡು ಹೋಗುತ್ತದೆ ಅಂತಯೇ ಒಂದು ಉತ್ತಮವಾದ ಸ್ನೇಹ ಒಬ್ಬ ಮನುಷ್ಯನನ್ನು ಅಷ್ಟೇ ಉತ್ತಮ ಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾನೆ.

ಉದಾಹರಣೆಗೆ ಕೃಷ್ಣ –ಸುಧಾಮ, ಕರ್ಣ–ದುರ್ಯೋಧನ ಕಾಳಿದಾಸ–ಭೋಜರಾಜ ಇದನ್ನು ಯಾರು ಮರೆಯಲು ಸಾಧ್ಯವಿಲ್ಲ.
ಸ್ನೇಹ ಅಂದರೆ ಹೇಗಿರಬೇಕು ಅಂದರೆ ನಮ್ಮ ಮೌನದಲ್ಲಿಯೇ ನಮ್ಮ ಮನವನ್ನು ಅರ್ಥ ಮಾಡಿಕೊಳ್ಳುವ ರೀತಿ ಸ್ನೇಹದ ಸ್ವಭಾವವಿರುತ್ತದೆ ಅಷ್ಟು ಗಾಢವಾದ ತಿಳುವಳಿಕೆ ಎಷ್ಟು ಹಣವಿದ್ದರೇನು? ಉತ್ತಮ ಸ್ನೇಹ ಇಲ್ಲದ ಮೇಲೆ ಎಷ್ಟು ಚೆಲುವಿದ್ದರೇನು? ಉತ್ತಮ ಗುಣವಿಲ್ಲದ ಮೇಲೆ ಎನ್ನುವ ಹಾಗೆ, ಸ್ನೇಹ ಎನ್ನುವುದು ತುಂಬಾ ಪುಣ್ಯದ ನಂತರ ಸಿಗುವುದು. ಏನು ಇದ್ದರೆ ಏನು ಬಂತು ಕಷ್ಟ–ಸುಖದಲ್ಲಿ ಹಂಚಿಕೊಳ್ಳುವ ಒಳ್ಳೆಯ ಮನಸ್ಸು ಇಲ್ಲ ಅಂದರೆ ಹಣ ನಮ್ಮ ದುಃಖವನ್ನು ಕಡಿಮೆ ಮಾಡುವುದಿಲ್ಲ,ನಮ್ಮ ಸಂತೋಷದಲ್ಲಿ ಭಾಗಿಯು ಆಗೋದಿಲ್ಲ. ಹಣ ಬೇಡ ಎಂದಲ್ಲ ಆದರೆ ಸ್ನೇಹಕ್ಕಿಂತ ಹಣ ಮುಖ್ಯ ಅಲ್ಲ, ಒಂದು ಒಳ್ಳೆ ಮನಸ್ಸು ಇರುವ ಒಂದು ಪುಟ್ಟ ಹೃದಯವನ್ನು ನಾವು ಪಡೆಯುವುದಕ್ಕೆ ಪುಣ್ಯ ಬೇಕು. ಸ್ನೇಹದಲ್ಲಿ ಮಾತ್ರ ಕೋಪ, ಸಿಟ್ಟು ಎಷ್ಟೇ ಇದ್ದರೂ ನಾವು ಎಷ್ಟೇ ಕೋಪಿಸಿಕೊಂಡರು ಅವರು ನಮ್ಮ ಸ್ನೇಹಿತ ಅಥವಾ ಸ್ನೇಹಿತೆ ಎಂದು ಕೋಪ ಬಿಟ್ಟು ಮತ್ತೆ ಮಕ್ಕಳ ರೀತಿ ಒಂದಾಗುತ್ತೇವೆ.

ಮುಕ್ತಾಯ:– ಆದ್ದರಿಂದ ಜೀವನದಲ್ಲಿ ಸ್ನೇಹ ಮುಖ್ಯವೇ ಹೊರತು ಹಣವಲ್ಲ.

**ಶಾಲಿನಿ ಬಿ.ಎ**
ಅಂತಿಮ ಬಿಕಾಂ,
ಎಸ್ ಆರ್ ಎನ್ ಆದರ್ಶ ಕಾಲೇಜ್,
ಚಾಮರಾಜಪೇಟೆ, ಬೆಂಗಳೂರು.